ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

**Thursday 24th September 2021, Page No.12**

# Virtual Graduation Day Ceremony in RVCE

Hosa Diganta dt: 23/9/21 Page 12

## ಹೊಸ ಕೋರ್ಸ್ ಅಧ್ಯಯನಕ್ಕೆ ವಿದ್ಯಾರ್ಥಿಗಳು ಮುಂದಾಗಲಿ

**ಬೆಂಗಳೂರು:** ತಂತ್ರಜ್ಞಾನಗಳು ಆಗಾಗ ಬದಲಾಗುತ್ತಾ ಇರುತ್ತವೆ. ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಹೊಸ ಹೊಸ ಕೋರ್ಸ್‌ಗಳ ಅಧ್ಯಯನದಲ್ಲಿ ತೊಡಗಬೇಕು ಎಂದು ಜರ್ಮನಿಯ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್,ಕಲೆಯ ಮುಖ್ಯಾಧಿಕಾರಿ ಪ್ರೊ .ಡಾ.ಕಟ್ರಿನ್ ಲೊಹ್ರ್ ಹೇಳಿದರು.

ಬುಧವಾರ ಬೆಂಗಳೂರಿನ ಆರ್. ವಿ. ಎಂಜಿನಿಯರಿಂಗ್ ಕಾಲೇಜಿನ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ವರ್ಚುಯಲ್ ಮುಖಾಂತರ ಭಾಗವಹಿಸಿ ಅವರು ಮಾತನಾಡಿದರು.ವಿದ್ಯಾರ್ಥಿಗಳ ಸಾಧನೆ ಕಂಡು ನನಗೆ ಅತೀವ ಸಂತಸವಾಗಿದೆ. ಈ ಕಾಲೇಜು ವಿಶ್ವೇಶ್ವರಯ್ಯರಂತಹ ಖ್ಯಾತ ಇಂಜಿನಿಯರ್ ನಾಡಿನಲ್ಲಿ ಇರುವುದು ಹೆಮ್ಮೆಯ ವಿಚಾರ. ತಂತ್ರಜ್ಞಾನ ಕ್ಷೇತ್ರ ಇಂದು ಮುಂಚೂಣಿಯಲ್ಲಿದೆ. ಪ್ರತಿ 10 ವರ್ಷಕ್ಕೊಮ್ಮೆ ಹೊಸ ತಂತ್ರಜ್ಞಾನ ಬರುತ್ತದೆ. ಆದರೆ ಹಿಂದೆ ಇರುವ ತಂತ್ರಜ್ಞಾನ ಹಾಗೇ ಇರುತ್ತವೆ. ಇದರಿಂದ ತಂತ್ರಜ್ಞಾನಗಳು ಅಪ್‌ಗ್ರೇಡ್ ಆಗುವಂತೆ ವಿದ್ಯಾರ್ಥಿಗಳೂ ಅಪ್‌ಗ್ರೇಡ್ ಆಗಬೇಕು. ಜಾಗತಿಕ ತಾಪಮಾನ, ಹವಾಮಾನ ವೈಪರೀತ್ಯಗಳಂತಹ ಸವಾಲು ಭವಿಷ್ಯದಲ್ಲಿ ಎದುರಾಗುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಂಶೋಧನೆ ನಡೆಸಬೇಕು ಎಂದರು.ಇದೇ ವೇಳೆ ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿ ಪದಕ ಪ್ರದಾನ ಹಾಗೂ ಪದವಿ ಪ್ರದಾನ ಮಾಡಲಾಯಿತು. ಆರ್.ವಿ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಡಾ. ಎಂ.ಕೆ.ಪಾಂಡುರಂಗ ಶೆಟ್ಟಿ ಭಾಗವಹಿಸಿದ್ದರು.